# ಪುಲಿ ಜಾಡು

## ಕೆ. ಶಿವಲಿಂಗಪ್ಪ ಹಂದಿಹಾಳು

ಕಲೆ: ಸಂತೋಷ್ ಸಸಿಹಿತ್ಲು

ಒತ್ತುಮುಣಿಗಿ ಸೂರ್ಯ ಮನಿಗಿ ಹೋಗೋ ಸಮಯ ಆಗಿತ್ತು. ಮಲ್ಲಿ ಸರ ಸರ ಬಂದವನೇ 'ಯವ್ವೋ ಬಾಳಾ ಬ್ಯಾಸರ ಆಗೇತಿ ಕಥೆ ಹೇಳು' ಎಂದು ಒಂದೇ ಸಮನೆ ಪೀಡಿಸಿದ. ದುರುಗಮ್ಮವ್ವ ಹೆಸರಿಗೆ ದುರುಗಮ್ಮಳೇ ಆದರೂ ಮನಸು ಮಾತ್ರ ಭೂಮ ತಾಯಿಕಿನ್ನ ದೊಡ್ಡದು. 'ಅಲ್ಲೋ ಪುಲಿ ನಿನಗೇನೋ ಅಂಥಾ ಬ್ಯಾಸರಿಕಿ, ಯಾರಿಂದ? ಎದಕ ಆಯ್ತು ಹೇಳು?' ಪುಲಿ ಮಲ್ಲಿ, ಅಲ್ಲಂಗೇ ನಮ್ಮ ಹುಡುಗರ ಗುಂಪಿನಾಗ ನೀನು ಹೇಳಿದ ಕಥೆ ಕೇಳಿಕಂಡು ಹಂಗೆ ತಪ್ಪಿಲ್ಲದೆ ಹೇಳ ಗಣಮಗ ನನ್ನ ಬುಟ್ಟರೆ ಯಾವನಾದ್ರೂ ಅದ್ಯಾನ ಹೇಳು? 'ನಿನ್ನಂಗೆ ಕರೆಷ್ಟು ಕತೆ ಹೇಳೋರು ನಂತಾಕ ಬರೋ ನಲವತ್ತು ನಾಕು ಮಕ್ಕಳಲ್ಲಿ ಯಾರೂ ಇಲ್ಲ' ಅಂದಳು.

ಪುಲಿ ಮಲ್ಲಿ ಏಳನೇ ತರಗತಿಯಲ್ಲಿ ಓದುತ್ತಿರುವ ಬಾಲಕ. ಯಾವುದೋ ಕಾಲಕ್ಕೆ ಇವರ ವಂಶದವನೊಬ್ಬ ಹುಲಿ ಬೇಟೆಯಾಡಿದ್ದಕ್ಕಾಗಿ ಇವರ ಕುಟುಂಬಕ್ಕೆ ಪುಲಿ ಅನ್ನೋ ಹೆಸರು ಎಲ್ಲರಿಗೂ ಜೋಡಿಯಾಗಿದೆ. ಶಾಲೆಯಲ್ಲಿ ಸಾಹಿತ್ಯ ಪರಿಷತ್ತಿನಿಂದ ನಡೆದ ಸ್ವರಚಿತ ಕಥಾವಾಚನ ಸ್ಪರ್ಧೆಯಲ್ಲಿ ಇವನಿಗೆ ಬಹುಮಾನ ಬಂದಿರದೆ, ಸಾಗರನಿಗೆ ಬಂದಿತ್ತು.

